ಕೊಳಕು ಜೀನ್ಸಿನಲ್ಲೇ ಕೊರಳಿಗೊಂದು ಚೆಂಡುಹೂವಿನ ಹಾರ ಹಾಕಿಕೊಂಡು ಒಂದು ಉದ್ದನೆಯ ಲಾಂಗನ್ನು ಬೀಸುತ್ತ ಬೀದಿಯುದ್ದಕ್ಕೂ ಹಾರಾಡಿದ್ದ. ಹಣೆಯಲ್ಲಿ ಹೆಬ್ಬೆಟ್ಟಗಲ ಕುಂಕುಮ; ಮುಂಗೈಗೆ ಏಳೆಂಟು ಸುತ್ತು ಕಟ್ಟಿಕೊಂಡ ಕೆಂಪು ಹಳದಿ ದಾರಗಳು. ಎಲ್ಲಿ ಯಾರನ್ನು ಕೊಂದು ಬಂದಿದ್ದನೋ, ನಡುಹಗಲಿನ ಬಿಸಿಲಲ್ಲಿ ಅವನ ಕೈಯಲ್ಲಿದ್ದ ಉದ್ದನೆಯ ಲಾಂಗಿನಿಂದ ರಕ್ತ ತೊಟ್ಟಿಡುತ್ತಿದ್ದುದನ್ನು ಕಂಡು ನಮ್ಮಲ್ಲಿ ಕೆಲವು ಮಕ್ಕಳು ಕಿಟಾರನೆ ಕಿರಿಚಿಕೊಂಡವು. ಹತ್ತು ಹದಿನೈದು ನಿಮಿಷಗಳಾದ ಮೇಲೆ ಅವನು ಏನೋ ವಟಗುಟ್ಟುತ್ತಾ ಬೀದಿಯ ಮಧ್ಯೆಯೇ ಬಿದ್ದುಬಿಟ್ಟಾಗ ಅವನ ಲಾಂಗು ಟಂಗ್ ಎಂದು ನೆಲಕ್ಕೆ ಬಡಿದಿತ್ತು. ಆವತ್ತೂ ಇವತ್ತಿನ ಹಾಗೆಯೇ ಗಿಜಿಗಿಜಿ ಜನ, ಟ್ರಾಫಿಕ್ ಜಾಮು. ಬಿದ್ದವನು ಮೇಲೇಳದೆ ಹಾಗೆಯೇ ನಿದ್ದೆಮಾಡಿಬಿಟ್ಟಂತಿತ್ತು. ಸಾಕಷ್ಟು ಹೊತ್ತು ಕಾದು ನಿಂತಿದ್ದ ಬೈಕುಗಳು ಕಾರುಗಳು ಅಂಜಿ ಅಳುಕುತ್ತಲೇ ಒಂದೊಂದಾಗಿ ಮೆಲ್ಲಗೆ ಅವನಿಗೆ ಸುತ್ತುಹಾಕಿಕೊಂಡು ಹೋಗಬೇಕಾಯಿತು.

ಇವತ್ತು ಹೊತ್ತೇರಿದಂತೆ ಹೆಚ್ಚಾಗುತ್ತಿದ್ದ ಉರಿಬಿಸಿಲಿನಲ್ಲಿ ಮಾಡುವುದಕ್ಕೆ ಬೇರೇನೂ ಕೆಲಸವಿಲ್ಲದವರಂತೆ ರಸ್ತೆಯ ತುಂಬಾ ಜನವೋ ಜನ. ಎಲ್ಲ ಬಡಾವಣೆಗಳಿಂದ ನಮ್ಮವರೇ ಜನರು, ಹೆಚ್ಚು ಹೆಚ್ಚು ಜನರು, ಅವರಲ್ಲೂ ಬಹುಮಟ್ಟಿಗೆ ಯುವಕರು ಬೇಲಿಗಳನ್ನು, ತಡೆಗೋಡೆಗಳನ್ನು ಹಾರುತ್ತ, ಯಾರ ಕಾಲುಗಳನ್ನೋ ತುಳಿಯುತ್ತ, ಯಾರಿಂದಲೋ ತುಳಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳುತ್ತ, ಲೌಡ್‌ಸ್ಪೀಕರುಗಳ ಬೊಬ್ಬೆಯ ಮಧ್ಯೆ, ಪೊಲೀಸ್ ವ್ಯಾನುಗಳ ಮಧ್ಯೆ ಪ್ರವೇಶಿಸುತ್ತ, ಮೆರವಣಿಗೆಯಲ್ಲಿ ಜಿಗಿದಾಡುತ್ತ ಲಾಠಿಯೇಟುಗಳ ಮಧ್ಯೆ, ಕುಂಡೆಗೆ ಬೀಳುವ ಒದೆಗಳ ಮಧ್ಯೆ, ಕೆಳಗೆ ಕುಸಿಯುವ ದೇಹಗಳ ಮಧ್ಯೆ ಹೆಂಗಸೊಬ್ಬಳು ಚಂಡಿಹಿಡಿದ ತನ್ನ ಮಗುವನ್ನು ಎಳೆದಾಡುತ್ತಿರುವಾಗ, ಮುದುಕನೊಬ್ಬ ತನ್ನ ಕೋಲಿನಿಂದ ದಾರಿ ಮಾಡಿಕೊಳ್ಳುತ್ತಿರುವಾಗ ಯಾರೋ ಬಗಲ ಚೀಲದಿಂದ ಒಂದು ಬಾಟಲನ್ನು ತೆಗೆದು ಅದರ ಮುಚ್ಚಳ ಬಿಚ್ಚಿ ಇನ್ನೇನು ಬಾಯಿಗೆ ನೀರು ಸುರಿದುಕೊಳ್ಳಬೇಕು, ಹಿಂದಿನಿಂದ ಯಾರೋ ನೂಕಿದ ರಭಸಕ್ಕೆ ಬಾಟಲ ನೀರು ಚೆಲ್ಲಿ ಅಕ್ಕಪಕ್ಕದಲ್ಲಿದ್ದವರ ಮುಖಗಳ ಮೇಲೆ ಸಿಡಿದು ಅವರಿಗೆ ಆ ಉರಿಬಿಸಿಲಿನಲ್ಲಿ ತುಸು ಹಾಯೆನಿಸುತ್ತಿರುವ ಸನ್ನಿವೇಶದಲ್ಲಿ ಈ ರಸ್ತೆ ಬಿಟ್ಟು ದೂರ ಹೋಗಿಬಿಡಬೇಕೆಂದರೆ ಹೊರಗೆ ಹೋಗುವ ದಾರಿ ಎಲ್ಲಿ? ಎಷ್ಟೋ ವರ್ಷಗಳಿಂದ ಒಮ್ಮೆಯೂ ಮುಖಕ್ಕೆ ಮುಖ ಕೊಟ್ಟು ನೋಡಿರದ, ನಕ್ಕಿರದ, ಮಾತಾಡಿಸಿರದ, ಮೈಗೆ ಮೈ ತಾಗಿಸಿರದ ಮಂದಿ ಇಲ್ಲಿರುವಂತಿಲ್ಲ ಎಲ್ಲಿಗೂ ಹೋಗುವಂತಿಲ್ಲ ಎನ್ನುವಂತೆ ಗುಂಪುಗಟ್ಟಿಕೊಂಡಿದ್ದು ಆ ಗುಂಪಿನ ಪಿಸುಪಿಸು ಒಂದು ಕಡೆ, ಎಲ್ಲೆಲ್ಲೋ ಸಿಕ್ಕಿಕೊಂಡ ಪಡ್ಡೆ ಹುಡುಗರ ಕೂಗಾಟ ಇನ್ನೊಂದು ಕಡೆ ಹಿಂದೆಂದೂ ಕಾಣದ ಗಲಭೆಯಾಗುತ್ತಿರುವಾಗ ತುಸು ದೂರದಲ್ಲಿ ಎಷ್ಟು ದೊಡ್ಡ ಬೊಬ್ಬೆಯೆದ್ದಿತೆಂದರೆ ನೆರೆದವರ ತಲೆಗಳೆಲ್ಲವೂ ಅತ್ತಲೇ ತಿರುಗಿದವು. ಜನಜಂಗುಳಿಯ ನಡುವೆ ಸಾಕಷ್ಟು ದೂರದಲ್ಲಿ ಮಂತ್ರಿ ಭದ್ರಪ್ಪನವರ ಮುಖ ಕಂಡದ್ದೇ ನಾವೆಲ್ಲರೂ ಮೊದಲಿಗಿಂತ ಚುರುಕಾಗಿ ಒಂದೇ ದನಿಯಲ್ಲಿ ಹೋ ಎಂದು ಕೂಗಿಕೊಂಡೆವು. ಹಾಗೆ ನೋಡಿದರೆ ಅದು ನಮ್ಮ ಮತ್ತು ನಮ್ಮ ನಾಯಕನ ನಡುವೆ ಇದ್ದ ಘನವಾದ ಸಂಬಂಧ. ಇಡೀ ವಾತಾವರಣವೇ ಸಂತೋಷ ಸಂಭ್ರಮಗಳಿಂದ ತುಂಬಿಹೋಯಿತು. ಲಾರಿಯ ಮೇಲೆ ಮಂತ್ರಿಯ ಜೊತೆ ನಿಂತಿದ್ದವರೊಬ್ಬರು ಮೈಕ್ರೋಫೋನಿಗೆ ಮೂತಿಯಿಟ್ಟು ಜನರು ಸಮಾಧಾನದಿಂದಿರಬೇಕೆಂದೂ ಮಾನ್ಯ ಮಂತ್ರಿಗಳಿಗೆ ಗೌರವ ತೋರಿಸುವ ವಿಧಾನ ಇದಲ್ಲವೆಂದೂ ಕೂಗಿ ಹೇಳುತ್ತಿದ್ದರು. ನಾವು ಅದೊಂದೂ ಕೇಳಿಸಲಿಲ್ಲವೆನ್ನುವಂತೆ ಹೋ ಎಂದು ಇನ್ನಷ್ಟು ಜೋರಾಗಿ ಅಬ್ಬರಿಸುತ್ತಾ ಚಪ್ಪಾಳೆ ತಟ್ಟಿದೆವು.

ಅಲಂಕರಿಸಿದ ಟ್ರಕ್ಕಿನ ಮೇಲೆ ಶಾಸಕ ನಾಗಯ್ಯನವರ, ಇತರ ರಾಜಕೀಯ ಮುಖಂಡರ ಜೊತೆ ನಿಂತಿದ್ದ ಭದ್ರಪ್ಪನವರು ತಮ್ಮ ಖದ್ದರು ಜುಬ್ಬದಲ್ಲೇ ಬೆವರುತ್ತ, ಲೌಡ್ ಸ್ಪೀಕರುಗಳು ಕಿವಿಗಡಚಿಕ್ಕುವಂತೆ ಕಕ್ಕುತ್ತಿದ್ದ ದೇಶಸೇವಾ ಧುರೀಣ ಭದ್ರಪ್ಪನವರಿಗೆ

